ಬಗೆಹರಿದಂತಾಗುತ್ತದೆ. ಮಾನ್ಯ ಸದಸ್ಯರು ತಿಳಿಸಿರುವಂತೆ ಆಸ್ಪತ್ರೆಗಳಲ್ಲಿರುವ ಸಮಸ್ಯೆಗಳನ್ನು ಗಮನಿಸಿ ಮೊದಲ ಆದ್ಯತೆ ನೀಡಿ ಕ್ರಮ ಕೈಗೊಳ್ಳುತ್ತೇವೆಂದು ಈ ಮೂಲಕ ತಿಳಿಸಬಯಸುತ್ತೇನೆ.

4) ವಿಷಯ : ರಾಜೋಳಿ ಬಂಡಾ ಏತ ನೀರಾವರಿ ಯೋಜನೆ ಕಾಮಗಾರಿ ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡುವುದು.

ಶ್ರೀ ಕೆ.ಶಿವಮೂರ್ತಿ (ಮಾಯಕೊಂಡ) : ಮಾನ್ಯ ಅಧ್ಯಕ್ಷರೆ, ಮಾಯಕೊಂಡ ಮತ್ತು ಬಿಳಿಚೋಡು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಾಜೋಳಿ ಏತ ನೀರಾವರಿ ಯೋಜನೆಯನ್ನು 2004ರಲ್ಲಿ ಕೈಗೆತ್ತಿಕೊಂಡಿದ್ದು, ಯೋಜನೆಯ ಕಾಮಗಾರಿ ಪೂರ್ಣಗೊಳಿಸಲು ಇದುವರೆಗೂ ಹಣ ಬಿಡುಗಡೆಯಾಗಿಲ್ಲ. ಯೋಜನೆ ಪೂರ್ಣಗೊಳಿಸಲು ವಿದ್ಯುಚ್ಛಕ್ತಿ ಪೂರೈಕೆಯಾಗಿಲ್ಲ ಮತ್ತು ಭೂ ಸ್ವಾಧೀನ ಪ್ರಕ್ರಿಯೆ ಕೂಡ ಪೂರ್ಣಗೊಂಡಿಲ್ಲ. ಸದರಿ ಯೋಜನೆಗೆ ಸುಮಾರು 125 ಕೋಟಿ ರೂ.ಗಳ ಆಯವ್ಯಯ ನಿಗದಿಯಾಗಿದ್ದು, ಪ್ರಸ್ತುತ 150 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಹೀಗಾಗಿ, ನಿನ್ನೆ ಆನಗೋಡುವಿನಲ್ಲಿ ರೈತರೆಲ್ಲರೂ ಒಂದೆಡೆ ಸೇರಿ ರಾಸ್ತಾ ರೋಕೋ ಚಳವಳಿ ಮಾಡುವುದರ ಮೂಲಕ ಕಾಮಗಾರಿ ಮುಕ್ತಾಯಗೊಳಿಸಬೇಕೆಂದು ಮತ್ತು ಅಗತ್ಯವಿರುವಷ್ಟು ಹಣ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಮಾಯಕೊಂಡ ಮತ್ತು ಬಿಳಿಜೋಡು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಹೊನ್ನೂರು, ಕೊಗ್ಗನೂರು, ಆನಗೋಡು, ಕಾಲವರ್ತಿ, ಹೆಬ್ಬಾಳು, ಕಂದನಕೋವಿ, ಅಣಜಿ, ಉಪ್ಪಿನಹಳ್ಳಿ, ಬಿಳಿಜೋಡು, ಆಲೆಕಲ್ಲು, ನರಗನಹಳ್ಳಿ, ನೇರ್ಲಿಗೆ, ಕೊಡಗನೂರು, ಸುಲ್ತಾನಿಪುರ, ದೊಡ್ಡರಂಗವ್ವನಹಳ್ಳಿ ಮತ್ತು ಅಬ್ಬೂರು ಕೆರೆಗಳಿಗೆ ತುಂಗಭದ್ರಾ ನಾಲೆಯಿಂದ ನೀರು ಹರಿಸಿ ಕುಡಿಯುವ ನೀರಿಗೆ ಮತ್ತು ನೀರಾವರಿ ಉದ್ದೇಶಕ್ಕೆ ಒದಗಿಸಿಕೊಡುವ ಯೋಜನೆ ಇದಾಗಿದೆ. ಇದುವರೆಗೂ ಕಾಮಗಾರಿ ಕೈಗೊಂಡಿರದ ಕಾರಣ ಈ ಏತ ನೀರಾವರಿ ಯೋಜನೆ ಕಳೆದ ಹತ್ತು ವರ್ಷಗಳಿಂದ ಹಾಗೇ ಉಳಿದಿದೆ. ಈ ದಿಸೆಯಲ್ಲಿ ಕಾಮಗಾರಿ ಪೂರ್ಣಗೊಳ್ಳಲು ಸರ್ಕಾರ ಹಣ ಬಿಡುಗಡೆ ಮಾಡಿ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಮುಗಿಸಬೇಕು. ಇಲ್ಲಿ ಭೂ ಸ್ವಾಧೀನ ಪ್ರಕ್ರಿಯೆ, ಪೈಪ್‌ಲೈನ್ ಅಳವಡಿಸುವುದು ಮತ್ತು ವಿದ್ಯುಚ್ಛಕ್ತಿ ಪೂರೈಸುವುದು, ಈ ಮೂರು ಕೆಲಸಗಳಾದರೆ ಆ ಭಾಗದ ಜನರಿಗೆ ಯೋಜನೆಯು ವರಪ್ರಸಾದವಾಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಶಿವಮೂರ್ತಿಯವರು ಪ್ರಸ್ತಾಪಿಸಿರುವ ವಿಷಯವನ್ನು ಸರ್ಕಾರ ಗಮನಿಸಿದ್ದು, ಇದಕ್ಕೆ ಸಣ್ಣ ನೀರಾವರಿ ಸಚಿವರಿಂದ ನಾಳೆ ಉತ್ತರ ಕೊಡಿಸುತ್ತೇನೆ.

5) ವಿಷಯ : ಮಡಿಕೇರಿಯಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದು.

ಶ್ರೀ ಕೆ.ಜಿ.ಬೋಪಯ್ಯ (ಮಡಿಕೇರಿ) : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರ ನಮ್ಮ ಜಿಲ್ಲೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡಿತ್ತು. ವೈದ್ಯಕೀಯ ಕಾಲೇಜು ಸ್ಥಾಪಿಸಲು ಅಗತ್ಯವಿರುವ ಮೂಲ ಸೌಕರ್ಯಗಳೆಲ್ಲವೂ ನಮ್ಮ ಜಿಲ್ಲೆಯಲ್ಲಿದೆ. ಇದಕ್ಕಾಗಿ 10 ಎಕರೆಗಳಷ್ಟು ಜಾಗ ಗುರುತಿಸಲಾಗಿದ್ದು, ಈ ತಕ್ಷಣದಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಕಟ್ಟಡವನ್ನು ಖಾಲಿ ಮಾಡಿ ಇರಿಸಿಕೊಳ್ಳಲಾಗಿದೆ. ಆದರೂ, ಇನ್ನೂ ಪ್ರಾರಂಭಿಸಿರುವುದಿಲ್ಲ. ಈ ಕುರಿತು ಕೌನ್ಸೆಲಿಂಗ್‌ನಲ್ಲೂ ಸಹ ಕಾಣುತ್ತಿಲ್ಲ. ಆದುದರಿಂದ, ನಮ್ಮ ಜಿಲ್ಲೆಯಲ್ಲಿ ತಕ್ಷಣದಲ್ಲಿ ವೈದ್ಯಕೀಯ ಕಾಲೇಜು ಪ್ರಾರಂಭಿಸಿದಲ್ಲಿ, All India Medical Councilಗೆ ಏನೇನು ಕಳುಹಿಸಬೇಕೋ, ಅದೆಲ್ಲವನ್ನೂ ನಮ್ಮ ಜಿಲ್ಲೆಯಿಂದ ಕಳುಹಿಸಿಕೊಡಲಾಗಿದೆ.

ಶ್ರೀ ಅಪ್ಪಚು ರಂಜನ್ ಎಂ.ಪಿ. : ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಏನೇನು ಅಗತ್ಯತೆಗಳು ಬೇಕೋ, ಎಲ್ಲವನ್ನೂ ಜಿಲ್ಲೆಯಿಂದ ಒದಗಿಸಿಕೊಟ್ಟಿದ್ದೇವೆ. ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಈಗಾಗಲೇ ಕಟ್ಟಡವನ್ನು ಪರಿಶೀಲಿಸಲಾಗಿದೆ. ಆದುದರಿಂದ, ವೈದ್ಯಕೀಯ ಕಾಲೇಜು ಕಟ್ಟಡ ತೆರೆದರೆ ಒಳ್ಳೆಯದು.

ಶ್ರೀ ಟಿ.ಬಿ.ಜಯಚಂದ್ರ : ನಿಮ್ಮ ಜಿಲ್ಲೆಯಲ್ಲಿ ಆದಂತೆ ನಮ್ಮ ಜಿಲ್ಲೆಯಲ್ಲೂ ಅದೇ ಪರಿಸ್ಥಿತಿ ಇದೆ. ನಾನು ಈ ಕುರಿತು ಮಾನ್ಯ ಮಂತ್ರಿಗಳಿಂದ ನಿರ್ದಿಷ್ಟ ಉತ್ತರ ಕೊಡಿಸುತ್ತೇನೆ. ಈ ಕುರಿತು ನಿಮಗಿರುವಷ್ಟೇ ಆಸಕ್ತಿ ನನಗೂ ಇದೆ. ವೈದ್ಯಕೀಯ ಕಾಲೇಜು ಸ್ಥಾಪಿಸಲು ಸರ್ವಾನುಮತದಿಂದ ಎಲ್ಲರೂ ಒಪ್ಪಿಗೆ ನೀಡಿದ್ದೇವೆ. ನಾವೂ ಹೇಳಿದ್ದೇವೆ.

6) ವಿಷಯ : ಹೆರಿಗೆ ಆಸ್ಪತ್ರೆ ಕಟ್ಟಡ ನಿರ್ಮಿಸಿಕೊಡುವುದು ಮತ್ತು 15 ಹಾಸಿಗೆಗಳ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.